
ಫಾಲನೇತ್ರ ಸಜ್ಜನ, ಶಿರಸಿ
ಕೃಷ್ಣ ಮತ್ತು ರಾಮ ಒಂದೇ ದೇವನ ಅವತಾರ. ಆದರೆ ರಾಮನ, ಕೃಷ್ಣನ ಲೆಕ್ಕಗಳೇಕೆ ಬೇರೆಬೇರೆ?




ರಾಮ ಏಕಪತ್ನೀವ್ರತಸ್ಥ; ಒಂದೇ ಲೆಕ್ಕ. ಕೃಷ್ಣನಿಗೆ ಅಷ್ಟ ಮಹಿಷಿಯರು...

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಈಗಿನ ಆನ್‌ಲೈನ್ ಕ್ಲಾಸಿಗೂ, ಆಗಿನ ಏಕಲವ್ಯನ ಕಲಿಕೆಗೂ ಏನು ವ್ಯತ್ಯಾಸ?
ಈಗ ಮೇಷ್ಟ್ರೇನಾದರೂ ಹೆಬ್ಬೆಟ್ಟು ಕೇಳಿದರೆ ಸ್ಪೇಸ್ ಬಾರ್ ಒತ್ತುವುದೇ ಕಷ್ಟವಾಗುತ್ತದೆ.

ಹೆಚ್.ಎ. ಶ್ರೀಧರ್, ಬೆಂಗಳೂರು
ಈಗ ವಾಕ್ ಸ್ವಾತಂತ್ರ್ಯ ಇದ್ದರೂ Walk ಸ್ವಾತಂತ್ರ್ಯ ಇಲ್ಲದ ಹಾಗೆ ಆಗಿಬಿಟ್ಟಿದೆಯಲ್ಲಾ...?
ಕಾಲು ಬೆಳೆಸಿದರೆ ಕಾಲನ ಕರೆ ಕೇಳಿಸುವಾಗ ಅWalk ಆಗಿರುವುದೇ ಸೂಕ್ತ.

ವಿ. ಹಮೀದ್, ವಿಟ್ಲ
ಬಾತ್‌ರೂಂನಲ್ಲಿದ್ದಾಗ ಒಳ್ಳೊಳ್ಳೆ ಯೋಚನೆಗಳು ಬರಲು ಕಾರಣವೇನು?



ಜಲದ ಸನ್ನಿಧಿಯಲ್ಲಿ ಮನ ಪ್ರಾಂಜಲ ಆಗುವುದಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಪತ್ನಿಯನ್ನು ಬಳ್ಳಾರಿಗಣಿ, ಪ್ರಿಯತಮೆಯನ್ನು ಕೋಲಾರಗಣಿ ಎಂದೇಕೆ ಹೇಳುವರು?
ಇಲ್ಲಿ ವಿವಾದದ, ಅಲ್ಲಿ ದಿವಾಳಿಯಾಗುವ ಸಾಧ್ಯತೆಯಿದೆ ಎಂದು ಸೂಚಿಸಲು.

ಜಗದೀಶ ಬಿ. ಹೊಸೂರು, ಮೈಸೂರು
ಲಂಚ ಇಲ್ಲದ ಇಲಾಖೆ ಇದ್ದರೆ ತಿಳಿಸಿ?
ಲಂಚ ಇಲ್ಲದss ಎಂದು ತೋರಿಸುವ ಉತ್ತರಕರ್ನಾಟಕದ ಸರ್ಕಾರಿ ಇಲಾಖೆಗಳು!

ಮೋಹನರಾಜು ಎಸ್.ಎ. ಶಂಕರಘಟ್ಟ
ನಾವು ಪರಿಸರವನ್ನು ಉಳಿಸಿ ಬೆಳೆಸುವುದು ಯಾವಾಗ?
ಕೊರೊನಾ ಪ್ರಯುಕ್ತ ಕಡ್ಡಾಯ ಲಾಕ್‌ಡೌನ್ ಆದಾಗ.

ಭುವನೇಶ ಕುಂಬಾರ, ಮೋಕ
ಕೊರೊನಾ ನಮ್ಮ ಹದಗೆಟ್ಟ ರಾಜಕೀಯಕ್ಕಿಂತಲೂ ಕೆಟ್ಟದೆ?
ಊಹೂಂ. ರಾಜಕೀಯಕ್ಕೆ ಲಸಿಕೆ ಎಂದೂ ಲಭ್ಯವಾಗದು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಪ್ರಾಣಿಗಳಲ್ಲಿ ಅತಿ ಸೂಕ್ಷ್ಮ ಪ್ರಾಣಿ ಯಾವುದು?
ಅತಿ ಸಣ್ಣ ವಿಷಯಕ್ಕೂ ಪ್ರತಿಕ್ರಿಯಿಸುವ ಬಾಸ್.

ಪಿ.ಜೆ. ರಾಘವೇಂದ್ರ, ಮೈಸೂರು
ಸಕಾರಾತ್ಮಕ, ನಕಾರಾತ್ಮಕಕ್ಕಿಂತ ವಿಕಾರಾತ್ಮಕವಾಗಿ ಪ್ರತಿಕ್ರಿಯಿಸುವವರೇ ಹೆಚ್ಚಾಗಿರಲು ಕಾರಣವೇನು?
ವಿಷವನ್ನು ತುಂಬಿಕೊಂಡು, ವಿಷವನ್ನೇ ಕಾರುವಾಗ ವಿಕಾರವಲ್ಲದೆ ಮತ್ತಾವ ಆಕಾರವೂ ಮೂಡದು.

ಮಂಡಿ ಕುಮಾರ್, ಬೆಂಗಳೂರು
ಹಿಂದಿನ ಕಾಲದಲ್ಲಿ ಮದುವೆಯ ನಂತರವೂ ಹೆಣ್ಣು ಶಿಲಾಬಾಲಿಕೆಯಂತೆ ಕಾಣಲು ಕಾರಣವೇನು?
ಜಂಕ್ ಫುಡ್ ಇಲ್ಲದ, ಕೆಲಸಗಳಲ್ಲೇ ವಿವಿಧ ವ್ಯಾಯಾಮಗಳು ಅಡಕವಾದ ಜೀವನ.

ಜಿ. ಸುಬ್ರಹ್ಮಣ್ಯ, ಬೆಂಗಳೂರು
ಹೆಣ್ಣಿಗೆ ಮದುವೆಯ ನಂತರ ಧರ್ಮಪತ್ನಿ ಎಂಬ ಬಿರುದು. ಗಂಡನಿಗೇಕೆ ಧರ್ಮಪತಿ ಎಂಬ ಬಿರುದಿಲ್ಲ?
ಧರ್ಮಕ್ಕೆ ದೊರಕದೆ ವಾಚು/ಉಂಗುರ/ಸೂಟು/ಹಣಕ್ಕೆ ಮಾರಾಟ ಆಗಿರುತ್ತಾನಲ್ಲ.

ನಾಜ್ಯೋತಿ, ಹೂವಿನಹಡಗಲಿ
ಹೆಲ್ಮೆಟ್ ಹಾಕೋದನ್ನು ಕಡ್ಡಾಯ ಮಾಡಿದ ಸರ್ಕಾರ ವೋಟ್ ಹಾಕೋದನ್ನು ಕಡ್ಡಾಯ ಮಾಡುತ್ತಿಲ್ಲವೇಕೆ?
ಸ್ಪರ್ಧಿಸುವ ಅಯೋಗ್ಯರಿಗೇ ಹಾಕಲೇಬೇಕು ಎಂದು ಒತ್ತಾಯಿಸಲು ಮುಜುಗರವಂತೆ.

## ಬಹುಮಾನಿತ ಪ್ರಶ್ನೆ

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ದೇಶದ ನಾಯಕರೆಲ್ಲ ಬ್ರಹ್ಮಚಾರಿಗಳಾದರೆ ದೇಶ ಹೇಗಿರುತ್ತೆ?
ಹನಿಟ್ರ್ಯಾಪ್ ರಾಷ್ಟ್ರೀಯ ವ್ಯಾಪಾರವಾಗಿ ಗುರುತಿಸಲ್ಪಡುತ್ತದೆ.

ಎನ್.ಕೆ. ಹೆಬ್ಬಾರ, ಕೋಣಿ
ಚಿನ್ನಾ ಅಂತ ಹೇಗೆ ಹೇಳುವುದು? ದರ ವಿಪರೀತವಾಗಿದೆಯಲ್ಲಾ...?
ಎಚ್ಚರ! ದುಭಾರಿ ಎಂದು ಕರೆಯದಿದ್ದರೆ ಕುತ್ತಿಗೆಗೆ ಬಂದೀತು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಫ್ಯಾಶನ್ ಬದಲಿಸುವ ಮನುಷ್ಯ ತಾನೇಕೆ ಬದಲಾಗುವುದಿಲ್ಲ?
ಆಗುತ್ತಾನಲ್ಲ! ನೆನ್ನೆಯಿಲ್ಲದ ಗಡ್ಡ, ನೆರಿಗೆ, ನೆರೆಗಳು ಇಂದು ಪ್ರತ್ಯಕ್ಷ.

ರಮೇಶ್, ಹನುಮನಾಳು
ಚಕ್ರವ್ಯೂಹ ಸರಿನೋ, ಪ್ರೇಮವ್ಯೂಹ ಸರಿನೋ?



ಮಾತೃಪ್ರೇಮದಿಂದ ಪೌತ್ರಪ್ರೇಮದವರೆಗಿನ ಪ್ರೇಮವ್ಯೂಹವೇ ಬೆಸ್ಟು.

ಬಿ.ಆರ್. ಉಷಾ, ಬೆಂಗಳೂರು
ಭಂಡ ಷಂಡ ಹೆಂಡ ಕುಡುಕ ಗಂಡನೊಡನೆ ಹೆಂಡತಿ ಹೇಗಿರಬೇಕು?
ಏಕಿರಬೇಕು? ಗುಂಡಿಗೆ ಬಂಡೆಯಾಗಿಸಿಕೊಂಡು ಸ್ವಾವಲಂಬಿ ಆಗಬೇಕು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಸತ್ತಂತೆ ಬದುಕುವುದಕ್ಕಿಂತ ಸತ್ತು ಬದುಕುವುದು ಮೇಲಲ್ಲವೆ?
ಕೊರೊನಾ ಸಮಯದ ವೈದ್ಯರು, ದಾದಿಯರಂತೆ ಸತ್ತು ಬದುಕಿಸುವುದು ಮತ್ತೂ ಉತ್ತಮ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in